(ಕಂದಾಯ ಇಲಾಖೆ)

# ಸಹಾಯಕ ಆಯುಕ್ತರವರ ನ್ಯಾಯಾಲಯ, ಹೊಸಪೇಟೆ.

ಎ.ವಿಲೇ.ಸಂ.ಕಂ.ಪಹಣಿ:ಅಪೀಲು:223/2013-14 ದಿನಾಂಕ:02.08.2016.

**ಉಪಸ್ಥಿತರು: ಡಾ. ಅವಿನಾಶ್ ಮೆನನ್ ರಾಜೇಂದ್ರನ್, ಭಾ.ಆ.ಸೇ**
**ಸಹಾಯಕ ಆಯುಕ್ತರು, ಹೊಸಪೇಟೆ.**

* * * * *

**ವಾದಿಗಳು: ಶ್ರೀ/ ಶ್ರೀಮತಿ**

1] ವಿ.ಮಾರೆಮ್ಮ ಗಂಡ ದಿ॥ ವಿಠಲಾಪುರದ ದೊಡ್ಡ ಹೊನ್ನೂರಪ್ಪ,
ವಾಸ: ಮಾವಿನಹಳ್ಳಿ ಗ್ರಾಮ, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ.

**[ಶ್ರೀ ಕೊಟ್ರೇಶ್ ಹಿರೇಮಠ್, ವಕೀಲರು, ಹೊಸಪೇಟೆ]**

**ಪ್ರತಿವಾದಿಗಳು: ಶ್ರೀ/ ಶ್ರೀಮತಿ**

1] ತಹಶೀಲ್ದಾರರು, ಹೊಸಪೇಟೆ.

**ವ್ಯಾಜ್ಯದಜಮೀನು**

| ತಾಲೂಕು | ಹೋಬಳಿ | ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|---|---|
| ಹೊಸಪೇಟೆ | ಕಂಪ್ಲಿ | ಹೊನ್ನಹಳ್ಳಿ | 130/ಎ | 00 ಎಕರೆ 21 ಸೆಂಟ್ಸ್ |
| | | | 130/ಬಿ | 00 ಎಕರೆ 25 ಸೆಂಟ್ಸ್ |
| | | | 130/ಸಿ | 00 ಎಕರೆ 20 ಸೆಂಟ್ಸ್ |

**ಪೀಠಿಕೆ:-**

ಹೊಸಪೇಟೆ ತಾಲೂಕು ಕಂಪ್ಲಿ ಹೋಬಳಿ ಹೊನ್ನಹಳ್ಳಿ ಗ್ರಾಮದ ಸ.ನಂ.130/ಎ ಪೈಕಿ ವಿಸ್ತೀರ್ಣ:00 ಎಕರೆ 21 ಸೆಂಟ್ಸ್; ಸ.ನಂ.130/ಬಿ ಪೈಕಿ ವಿಸ್ತೀರ್ಣ:00 ಎಕರೆ 25 ಸೆಂಟ್ಸ್; ಸ.ನಂ.130/ಸಿ ಪೈಕಿ ವಿಸ್ತೀರ್ಣ:00 ಎಕರೆ 20 ಸೆಂಟ್ಸ್; ವಿವಾದಾಸ್ಪದ ಜಮೀನುಗಳಿಗೆ ಸಂಬಂಧಿಸಿದಂತೆ ತಹಶೀಲ್ದಾರರು, ಹೊಸಪೇಟೆ ಇವರ ಕಾರ್ಯಾಲಯದ ಹಿಂಬರಹ ಸಂಖ್ಯೆ: ಸಂ/ಕಂ/ಪಹಣಿ/259/12-13 ದಿನಾಂಕ:18.07.2013 ವನ್ನು ಪ್ರಶ್ನಿಸಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಮೇಲ್ಮನವಿಯನ್ನು ವಾದಿಪರ ವಕೀಲರು ದಿನಾಂಕ:14.01.2016 ರಂದು ಸಲ್ಲಿಸಿರುತ್ತಾರೆ.

ವಾದಿಗಳ ಪರ ವಕೀಲರು ಸಲ್ಲಿಸಿದ ಕಡತವನ್ನು ಪರಿಶೀಲಿಸಿ, ನೈಸರ್ಗಿಕ ನ್ಯಾಯದ ಹಿತದೃಷ್ಟಿಯಿಂದ ಪ್ರಕರಣದ ವಿಚಾರಣೆಯನ್ನು ದಿನಾಂಕ:15.04.2014ಕ್ಕೆ ನಿಗಧಿಪಡಿಸಿ ಉಭಯಪಕ್ಷಗಳಿಗೆ ನೋಟೀಸು ಮೂಲಕ ತಿಳಿಸಿ ವಿಚಾರಣೆಯನ್ನು ಪ್ರಾರಂಭಿಸಲಾಯಿತು.

ವಾದಿಪರ ವಕೀಲರ ಪ್ರಕಾರ, ಸದರಿ ವ್ಯಾಜ್ಯದ ಜಮೀನು ಮೂಲತ: ಎಂ.ದೇವಪ್ಪ ತಂದೆ ಅಡಿವೆಪ್ಪ ಇವರಿಗೆ ಸಂಬಂಧಿಸಿದ್ದಾಗಿದ್ದು, ವಾದಿಯ ಗಂಡನಾದ ವಿಠಲಾಪುರದ ದೊಡ್ಡ ಹೊನ್ನೂರಪ್ಪ ಇವರು ಎಂ.ದೇವಪ್ಪ ಇವರಿಂದ ನೋಂದಾಯಿತ ಕ್ರಯ ದಸ್ತಾವೇಜು ದಿನಾಂಕ:24.04.2000 ರಂದು ರೂ.50,000/- ಗಳಿಗೆ ಕ್ರಯಕ್ಕೆ ಪಡೆದಿರುವುದಾಗಿ, ಕ್ರಯಕ್ಕೆ ಪಡೆದ ದಿನದಿಂದಲೂ ವಾದಿಯ ಗಂಡನಾದ ವಿಠಲಾಪುರದ ದೊಡ್ಡ ಹೊನ್ನೂರಪ್ಪ ಇವರೇ ಸದರಿ ಜಮೀನಿನಲ್ಲಿ ಯಾರಿಂದಲೂ ಯಾವುದೇ ರೀತಿಯ ಅಡಚಣೆಯಿಲ್ಲದೇ ಹಕ್ಕು ಮತ್ತು ಸ್ವಾಧೀನಾನುಭವವನ್ನು ಹೊಂದಿರುವುದಾಗಿ, ಹಾಗೂ ಕ್ರಮಬದ್ದವಾಗಿ ಸದರಿ ಜಮೀನಿನ ಕಂದಾಯವನ್ನು ಪಾವತಿಸುತ್ತಾ ಬಂದಿರುವುದಾಗಿ, ಇವರ ಮರಣಾನಂತರ ಸದರಿ ಜಮೀನುಗಳಲ್ಲಿ ಇವರ ಕಾನೂನುಬದ್ದ ವಾರಸುದಾರರಾದ ವಾದಿಯ ಹೆಸರಿಗೆ ಪೋತಿ ವಾರಸ ಪ್ರಕಾರ ಹಕ್ಕು ಬದಲಾವಣೆಯಾಗಿರುವುದಾಗಿ ತಿಳಿಸಿರುತ್ತಾರೆ.

ಆದರೆ, ಸದರಿ ವ್ಯಾಜ್ಯದ ಜಮೀನುಗಳ ಪಹಣಿ ಕಾಲಂ 6 ರಲ್ಲಿ ಸರ್ಕಾರ ಎಂದು ನಮೂದಾಗಿದ್ದು, ಸರ್ಕಾರ ಎಂಬ ಪದವನ್ನು ತೆಗೆದುಹಾಕಲು ಮನವಿಮಾಡಿರುತ್ತಾರೆ. ಸದರಿ ಪಹಣಿಗಳಲ್ಲಿ ಸರ್ಕಾರ ಎಂದು ನಮೂದು ಇದ್ದು ಇದರಿಂದ ವಾದಿಗಳಿಗೆ ಬ್ಯಾಂಕಿನಿಂದ ಹಣಕಾಸಿನ ನೆರವು ಪಡೆಯಲು ತೊಂದರೆಯಾಗುತ್ತಿರುವುದಾಗಿ, ಈ ಬಗ್ಗೆ ಪ್ರತಿವಾದಿ-1 ರವರಲ್ಲಿ ಸದರಿ ಪದವನ್ನು ಕಾಲಂ 6 ರಲ್ಲಿ ತೆಗೆದು ಹಾಕಲು ಕೋರಿ ಅರ್ಜಿ ಸಲ್ಲಿಸಿದ್ದು, ಪ್ರತಿವಾದಿ-1 ರವರು ದಿನಾಂಕ:18.07.2013 ರಂದು ಮೇಲ್ಮನವಿ ಸಲ್ಲಿಸಿ ಪರಿಹಾರ ಕಂಡುಕೊಳ್ಳಲು ತಿಳಿಸಿ ಹಿಂಬರಹ ನೀಡಿರುವುದಾಗಿ, ಸದರಿ ಹಿಂಬರಹದಿಂದ ಬಾದಿತಗೊಂಡ ವಾದಿಯು ಸದರಿ ಮೇಲ್ಮನವಿಯನ್ನು ಸಲ್ಲಿಸಿದ್ದು ಪ್ರಶ್ನಿತ ಆದೇಶವನ್ನು ತಳ್ಳಿಹಾಕುತ್ತಾ, ಸದರಿ ವ್ಯಾಜ್ಯದ ಜಮೀನುಗಳ ಪಹಣಿ ಕಾಲಂ 6 ರಲ್ಲಿ ಸರ್ಕಾರ ಎಂಬ ಪದವನ್ನು ತೆಗೆದು ಹಾಕಿ ಪಟ್ಟಾ ಎಂದು ನಮೂದು ಮಾಡಲು ಕೋರಿರುವುದಾಗಿ ತಿಳಿಸಿರುತ್ತಾರೆ.

**ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕಡತದಲ್ಲಿಯ ದಾಖಲೆಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡ ಅಂಶಗಳು ಕಂಡು ಬಂದಿರುತ್ತವೆ.**

1. ಸದರಿ ಪ್ರಶ್ನಿತ ಹಿಂಬರಹ ಸಂಖ್ಯೆ: ಸಂ.ಕಂ.ಪಹಣಿ/259/12-13 ದಿನಾಂಕ:18.07.2013 ವನ್ನು ಸಲ್ಲಿಸಿದ್ದು, ಸದರಿ ಹಿಂಬರದಲ್ಲಿ ಸದರಿ ವ್ಯಾಜ್ಯದ ಜಮೀನುಗಳ ಪಹಣಿ ಕಾಲಂ 6 ರಲ್ಲಿರುವ ಸರ್ಕಾರವನ್ನು ರದ್ದುಪಡಿಸಿ ಪಟ್ಟಾ ಎಂದು ನಮೂದು ಮಾಡುವಂತೆ ಕೋರಿದ್ದು, ಸದರಿ ವಿಷಯದ ಬಗ್ಗೆ ಪರಿಶೀಲಿಸಲಾಗಿ ನಿಮ್ಮ ಮನವಿಯನ್ನು ಮೇಲ್ಮನವಿ ಪ್ರಾಧಿಕಾರದಲ್ಲಿ ಅರ್ಜಿ ಸಲ್ಲಿಸಿ ಪರಿಹಾರ ಕಂಡುಕೊಳ್ಳಲು ತಿಳಿಸಿದೆ ಎಂದು ಹಿಂಬರಹ ನೀಡಿರುತ್ತಾರೆ.
2. ಸದರಿ ವ್ಯಾಜ್ಯದ ಜಮೀನುಗಳನ್ನು **ಎಂ.ದೇವಪ್ಪ** ಇವರಿಂದ **ವಿ.ಹೊನ್ನೂರಪ್ಪ** ಇವರು ರೂ.50,000/- ಗಳಿಗೆ ನೋಂದಾಯಿತ ಕ್ರಯ ದಸ್ತಾವೇಜು ಸಂಖ್ಯೆ:46/2000-01 ದಿನಾಂಕ:24.04.2000 ರಂದು ಕ್ರಯಕ್ಕೆ ಪಡೆದಿರುವುದು ಇ.ಸಿ. ಮತ್ತು ಕ್ರಯ ಪತ್ರದಿಂದ ತಿಳಿದುಬಂದಿರುತ್ತದೆ.
3. ಸದರಿ ವ್ಯಾಜ್ಯದ ಜಮಿನುಗಳಿಗೆ ಸಂಬಂಧಿಸಿದಂತೆ, 1968-69 ರಿಂದ 2015-16 ನೇ ಸಾಲಿನ ಕೈ ಬರಹ ಪಹಣಿಗಳನ್ನು ಲಗತ್ತಿಸಿದ್ದು, ಸದರಿ ಪಹಣಿಗಳನ್ನು ಪರಿಶೀಲಿಸಲಾಗಿ ಸದರಿ ಜಮಿನುಗಳ ಕಾಲಂ 6 ರಲ್ಲಿ **ಸರ್ಕಾರ** ಎಂದು ನಮೂದು ಇರುವುದು ಕಂಡುಬಂದಿರುತ್ತದೆ.
4. ಸದರಿ ಜಮೀನುಗಳ ಡಯಾಗ್ಲಾಟ್ ಪ್ರತಿ ಸಲ್ಲಿಸಿದ್ದು, **ಮುಂಡಾಸದ ರಾಮನಿಗಾರಿ ಹುಲುಗ ಮತ್ತು ಮುಂಡಾಸದ ರಾಮನಿಗಾರಿ ನಾಗ** ಎಂದು ಪಟ್ಟಾದಾರರ ಹೆಸರು ಇದ್ದು ಇನಾಂ ಭೂಮಿಯಾಗಿರುವುದು ಕಂಡು ಬಂದಿರುತ್ತದೆ.
5. ಸದರಿ ವ್ಯಾಜ್ಯದ ಜಮೀನುಗಳಿಗೆ ಸಂಬಂಧಿಸಿದಂತೆ ಪಟ್ಟಾ ಮಂಜೂರಾದ ಬಗ್ಗೆ **ಫಾರಂ-2** ಲಗತ್ತಿಸಿದ್ದು, ಇದರಲ್ಲಿ ವಿಕ್ರಯದಾರರಾದ **ಮುಂಡಾಸದ ದೇವಣ್ಣ ತಂದೆ ಅಡಿವೆಪ್ಪ** ಇವರಿಗೆ ತಹಶೀಲ್ದಾರರು, ಹೊಸಪೇಟೆ ಇವರಿಂದ ದಿನಾಂಕ:04.04.94 ರಂದು ಪಟ್ಟಾ ಮಂಜೂರಾದ ಬಗ್ಗೆ ಫಾರಂ-2 ನೀಡಿರುವುದು ಕಂಡುಬಂದಿರುತ್ತದೆ.
6. ಸದರಿ ಅಪೀಲನ್ನು ದಿನಾಂಕ:10.12.2015 ರಂದು ಉಭಯ ಪಕ್ಷಗಾರರು ಸತತವಾಗಿ ಗೈರಾಗಿರುವುದರಿಂದ ಸದರಿ ಅಪೀಲನ್ನು ಮುಕ್ತಾಯಗೊಳಿಸಲಾಗಿದ್ದು, ಆದರೆ ದಿನಾಂಕ:14.01..2016 ರಂದು ವಾದಿಪರ ವಕೀಲರು ಸಿ.ಪಿಸಿ. ಕಲಂ 151 ಹಾಗೂ ಕರ್ನಾಟಕ ಭೂ ಕಂದಾಯ ಕಲಂ 25 ರಡಿಯಲ್ಲಿ ಅರ್ಜಿ ಸಲ್ಲಿಸಿ ಸದರಿ ಅಪೀಲನ್ನು ಪುನರವಲೋಕನಕ್ಕೆ ಅವಕಾಶ ಮಾಡಿಕೊಡಲು ಕೋರಿದ್ದು, ಕೋರಿಕೆಯನ್ನು ಮನ್ನಿಸಿ ವಿಚಾರಣೆ ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ, ಮೇಲಿನ ಎಲ್ಲ ಅಂಶಗಳನ್ನು ಪರಿಶೀಲಿಸಲಾಗಿ ಹಾಗೂ ಪ್ರಕರಣದಲ್ಲಿಯ ದಾಖಲೆಗಳ ಆಧಾರದ ಮೇಲೆ, ಹೊಸಪೇಟೆ ತಾಲೂಕು ಕಂಪ್ಲಿ ಹೋಬಳಿ ಹೊನ್ನಹಳ್ಳಿ ಗ್ರಾಮದ ಸ.ನಂ.130/ಎ ಪೈಕಿ ವಿಸ್ತೀರ್ಣ:00 ಎಕರೆ 21 ಸೆಂಟ್ಸ್; ಸ.ನಂ.130/ಬಿ ಪೈಕಿ ವಿಸ್ತೀರ್ಣ:00 ಎಕರೆ 25 ಸೆಂಟ್ಸ್; ಸ.ನಂ.130/ಸಿ ಪೈಕಿ ವಿಸ್ತೀರ್ಣ:00 ಎಕರೆ 20 ಸೆಂಟ್ಸ್; ವಿವಾದಾಸ್ಪದ ಜಮೀನುಗಳಿಗೆ ಸಂಬಂಧಿಸಿದಂತೆ ತಹಶೀಲ್ದಾರರು, ಹೊಸಪೇಟೆ ಇವರ ಕಾರ್ಯಾಲಯದ ಹಿಂಬರಹ ಸಂಖ್ಯೆ: ಸಂ/ಕಂ/ಪಹಣಿ/259/12-13 ದಿನಾಂಕ:18.07.2013 ವನ್ನು ರದ್ದುಪಡಿಸುತ್ತಾ, ಸದರಿ ವ್ಯಾಜ್ಯದ ಜಮೀನುಗಳಿಗೆ ದಿನಾಂಕ:04.04.94 ರಂದು ಫಾರಂ-2 ರ ಮೂಲಕ ಪಟ್ಟಾ ಮಂಜೂರಾಗಿದ್ದು ಸದರಿ ವ್ಯಾಜ್ಯದ ಜಮೀನುಗಳ ಕಾಲಂ 6 ರಲ್ಲಿ ಸರ್ಕಾರ ಎಂದು ಇರುವ ನಮೂದನ್ನು ರದ್ದುಪಡಿಸಿ, **ಕಾಲಂ 6 ರಲ್ಲಿ ಪಟ್ಟಾ** ಎಂದು ನಮೂದು ಮಾಡಲು ಈ ಕೆಳಕಂಡಂತೆ

## -: ಆದೇಶ :-

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನಲೆ ಮತ್ತು ಕಾರಣಗಳ ಆಧಾರದ ಮೇಲೆ **ಅಪೀಲನ್ನು ಅಂಗೀಕರಿಸುತ್ತಾ,** ಹೊಸಪೇಟೆ ತಾಲೂಕು ಕಂಪ್ಲಿ ಹೋಬಳಿ ಹೊನ್ನಹಳ್ಳಿ ಗ್ರಾಮದ ಸ.ನಂ.130/ಎ ಪೈಕಿ ವಿಸ್ತೀರ್ಣ:00 ಎಕರೆ 21 ಸೆಂಟ್ಸ್; ಸ.ನಂ.130/ಬಿ ಪೈಕಿ ವಿಸ್ತೀರ್ಣ:00 ಎಕರೆ 25 ಸೆಂಟ್ಸ್; ಸ.ನಂ.130/ಸಿ ಪೈಕಿ ವಿಸ್ತೀರ್ಣ:00 ಎಕರೆ 20 ಸೆಂಟ್ಸ್; ವಿವಾದಾಸ್ಪದ ಜಮೀನುಗಳಿಗೆ ಸಂಬಂಧಿಸಿದಂತೆ ತಹಶೀಲ್ದಾರರು, ಹೊಸಪೇಟೆ ಇವರ ಕಾರ್ಯಾಲಯದ ಹಿಂಬರಹ ಸಂಖ್ಯೆ: ಸಂ/ಕಂ/ಪಹಣಿ/259/12-13 ದಿನಾಂಕ:18.07.2013 ವನ್ನು ರದ್ದುಪಡಿಸುತ್ತಾ, ಸದರಿ ವ್ಯಾಜ್ಯದ ಜಮೀನುಗಳಿಗೆ ದಿನಾಂಕ:04.04.94 ರಂದು ಫಾರಂ-2 ರ ಮೂಲಕ ಪಟ್ಟಾ ಮಂಜೂರಾಗಿದ್ದು ಸದರಿ ವ್ಯಾಜ್ಯದ ಜಮೀನುಗಳ ಕಾಲಂ 6 ರಲ್ಲಿ ಸರ್ಕಾರ ಎಂದು ಇರುವ ನಮೂದನ್ನು ರದ್ದುಪಡಿಸಿ, **ಕಾಲಂ 6 ರಲ್ಲಿ ಪಟ್ಟಾ** ಎಂದು ನಮೂದು ಮಾಡಲು ತಹಶೀಲ್ದಾರರು, ಹೊಸಪೇಟೆ ಇವರಿಗೆ ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ, ಈ ದಿನ ದಿನಾಂಕ:02.08.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

[ ಡಾ. ಅವಿನಾಶ್ ಮೆನನ್ ರಾಜೇಂದ್ರನ್, ಭಾ.ಆ.ಸೇ]
**ಸಹಾಯಕ ಆಯುಕ್ತರು,**
**ಹೊಸಪೇಟೆ.**

Sub-Divisional Magistrate, Hospet

ವಾದಿ : ಪ್ರತಿವಾದಿಗಳಿಗೆ
**ಪ್ರತಿಯನ್ನು:-** ತಹಶೀಲ್ದಾರರು, ಹೊಸಪೇಟೆ ಇವರಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.

ರವಾನಿಸಲಾಗಿದೆ 03/8/16
ಕ್ರಮಾಂಕ
ದಿನಾಂಕ

(LTM of Appellant son Maleppa)